ಶ್ರೀ ಜಿ. ಎಸ್. ಬಸವರಾಜ್.—ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ಕೊಟ್ಟ ಪಟ್ಟಿಯಲ್ಲಿ ಅನೇಕ ಹಳ್ಳಿಯ ರೋಡುಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡಿಲ್ಲ. ಈಗಲಾದರೂ ತಾವು ಈ ಹಳ್ಳಿಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡು ಸದರಿ ರಸ್ತೆಗಳನ್ನು ರಿಪೇರಿಮಾಡಲಿಕ್ಕೆ ಆದೇಶ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಹಳ್ಳಿಗಳಲ್ಲಿ ಪಟ್ಟಿ ಮತ್ತು ಕಾಲೋನಿಗಳು ಏನು ಇವೆ ಅವುಗಳಿಗೂ ಸಹ ಸರಿಯಾದ ರಸ್ತೆಗಳನ್ನು ಮಾಡಬೇಕು. ನನ್ನ ಕ್ಷೇತ್ರದಲ್ಲಿ ಈ ರಸ್ತೆಗಳನ್ನು ವುದಕ್ಕೆ ಸರ್ಕಾರದವರು ಸೂಕ್ತ ಆದೇಶವನ್ನು ಕೊಡುವರೇ ?

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಎಲ್ಲಾ ರಸ್ತೆಗಳನ್ನು ನಮ್ಮ ಇಲಾಖೆಗೆ ಸೇರಿಸಿಕೊಳ್ಳುತಕ್ಕದ್ದು ಆರ್ಥಿಕ ಮುಗ್ಗಟ್ಟಿನಿಂದ ಸಾಧ್ಯವಾಗಿಲ್ಲ. ಮತ್ತೆ ಮಾನ್ಯ ಸದಸ್ಯರು ಪರಿಶಿಷ್ಟ ವರ್ಗದವರಿಗೆ ರಸ್ತೆಗಳನ್ನು ಮಾಡಿಸಬೇಕು ಎಂದು ಹೇಳಿದ್ದಾರೆ. ನಮ್ಮಲ್ಲಿ ಟ್ರೈಬಲ್ ಸ್ಕೀಂ ಎಂದು ಹೇಳಿ ಒಂದು ಯೋಜನೆ ಇದ್ದು ಇದರ ಪ್ರಕಾರ ಒಂದೊಂದು ತಾಲ್ಲೂಕಿಗೆ ಒಂದೆರಡು ಮೂರು ರಸ್ತೆಗಳನ್ನು ತೆಗೆದು ಕೊಳ್ಳಲಿಕ್ಕೆ ಹಣವನ್ನು ನಾವು ಒದಗಿಸಿದ್ದೇವೆ. ಮತ್ತು ಆದ್ಯತೆಯ ಮೇಲೆ ಕೆಲಸಗಳನ್ನು ಮಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಿ. ಎಸ್. ಬಸವರಾಜ್.—ದಯಮಾಡಿ ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದಲ್ಲಿರುವ ಹಳ್ಳಿಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡು ಅವುಗಳಿಗೆ ಸರಿಯಾದ ರಿಪೇರಿ ಮಾಡುವುದಕ್ಕೆ ಸೂಕ್ತ ಆದೇಶ ವನ್ನು ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಹಳ್ಳಿಗಳನ್ನು ನಮ್ಮ ಇಲಾಖೆಗೆ ಸೇರಿಸಿಕೊಂಡರೆ ನಮಗೆ ಸುಮಾರು 45 ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಹೇಳುವ ಅಂದಾಜು ಪಟ್ಟಿ ನನ್ನಲ್ಲಿದೆ. ಇವೆಲ್ಲ ವನ್ನೂ ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇದ್ದರೂ ಕೆಲವೊಂದನ್ನು ಮಾತ್ರ ತೆಗೆದುಕೊಳ್ಳು ವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ :— ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರೇಷ್ಮೆ ಕೈಗಾರಿಕೆಯ ಸ್ಥಾಪನೆ.

ಪ್ರಶ್ನೆ 127(76) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಕೈಗಾರಿಕಾ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಮೊಳಕಾಲ್ಮೂರು ತಾಲ್ಲೂಕನ್ನು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶವೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ. ಹಾಗಿದ್ದಲ್ಲಿ ಮೊಳಕಾಲ್ಮೂರು ತಾಲ್ಲೂಕನ್ನು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶವೆಂದು ಸರ್ಕಾರದವರು ಘೋಷಿಸುವರೇ ;

ಇ. ಮೊಳಕಾಲ್ಮೂರು ತಾಲ್ಲೂಕ ರೇಷ್ಮೆ ಕೈಗಾರಿಕೆಯಲ್ಲಿ ಪ್ರಸಿದ್ಧಿಯಾಗಿದೆಯೆಂದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ;

ಈ. ಹಾಗಿದ್ದಲ್ಲಿ ಒಂದು ರೇಷ್ಮೆಯ ಕೈಗಾರಿಕೆಯನ್ನು ಇನ್ನೂ ಸ್ಥಾಪಿಸದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) :—

ಅ. ಬಂದಿದೆ.

ಆ. 1-11-1982 ರಿಂದ ಸರ್ಕಾರವು ನೀಡಿರುವ ಹೊಸ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳ ಆದೇಶದಿಂದ ಮೊಳಕಾಲ್ಮೂರು ತಾಲ್ಲೂಕನ್ನು 2ನೇ ವಲಯದಲ್ಲಿ ಅಳವಡಿಸಲಾಗಿದೆ.

ಇ. ಬಂದಿದೆ.

ಈ. ಸರಕಾರಿ ವತಿಯಲ್ಲಿ ರೇಷ್ಮೆ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶಗಳಿಲ್ಲ.

ವಿಷಯ :— ಉಚ್ಚ ನ್ಯಾಯಾಲಯವನ್ನು ಕಟ್ಟುವ ಬಗೆ.

ಪ್ರಶ್ನೆ 128(98) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಬೆಂಗಳೂರು ಹಳೆಯ ಅಠಾರ ಕಛೇರಿಯನ್ನು ರೋಮನ್ ಹಾಗೂ ಗ್ರೀಕ್ ಶೈಲಿಯಲ್ಲಿ ಕಟ್ಟಿರುವ ಕಟ್ಟಡದ ಉದ್ಘಾಟನೆಯಾದದ್ದು ಯಾವ ವರ್ಷದಲ್ಲಿ ಹಾಗೂ ಇದಕ್ಕೆ ತಗುಲಿದ ವೆಚ್ಚ ಎಷ್ಟು ;

ಆ. ಮೇಲ್ಕಂಡ ಕಟ್ಟಡದ ಆಯುಷ್ಯ ಅವಧಿ ಎಷ್ಟು ಹಾಗೂ ಇನ್ನು ಎಷ್ಟು ವರ್ಷ ಬಾಳಲಿದೆ ಮತ್ತು ಸರ್ಕಾರವು ಇದನ್ನು ಕೆಡವಿ ಇಂಥದೇ ಬೇರೊಂದು ಕಟ್ಟಡ ಕಟ್ಟುವ ವಿಚಾರ ಮಾಡುತ್ತಿರುವುದು ನಿಜವೇ ;

ಇ. ಇಂಥದೇ ಬೇರೊಂದು ಕಟ್ಟಡ ಕಟ್ಟುವ ನಿರ್ಧಾರವಿದ್ದರೆ ಅದಕ್ಕೆ ಬರಬಹುದಾದ ಅಂದಾಜು ವೆಚ್ಚ ಎಷ್ಟು ಹಾಗೂ ಎಷ್ಟು ಅವಧಿಯಲ್ಲಿ ನಿರ್ಮಿಸಲಾಗುವುದು ಎಂಬುದನ್ನು ತಿಳಿಸುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು) :—